ಈ) ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಕಳೆದ 3 ವರ್ಷಗಳಲ್ಲಿ 2001–02 ರಿಂದ 2003–04 ರಲ್ಲಿ ವಸತಿಗಳನ್ನು ಮಂಜೂರು ಮಾಡಿದ ಫಲಾನುಭವಿಗಳ ವಿವರ ಕೆಳಗಿನಂತಿದೆ

ಯೋಜನೆ	ಫಲಾನುಭವಿಗಳಿಗೆ ಮಂಜೂರಾದ ಮನೆಗಳ ಹಣ
ಆಶ್ರಯ	1529
ಅಂಬೇಡ್ಕರ್	468
ನಮಗ್ರಾಮ	600
ದೇವದಾಸಿ	93
ಎಸ್ ಸಿ ತಾಂಡ	521
ಜಿ.ಪಿ.ಹೆಚ್.ಪಿ.	2056
ಎ.ಸಿ.ಎ.	464
ಐ.ಎ.ವೈ. (ಹೊಸ)	1043
ಐ.ಎ.ವೈ. (ಉನ್ನತೀಕರಣ)	508
ಪಿ.ಎಂ.ಜಿ.ವೈ.	134
ಒಟ್ಟು	7415

ಉ) 2001–02 ರಿಂದ 2003–04 ರವರೆಗೆ ಮೇಲೆ ತೋರಿಸಿದ ವಸತಿ ಯೋಜನೆಗಳಡಿಯಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಮನೆಗಳನ್ನು ನಿರ್ಮಿಸದೆ ಮುಂಗಡವಾಗಿ ಹಣ ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಅನ್ವಯಿಸುವುದಿಲ್ಲ.

1106 (764) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜುಗಳೆಷ್ಟು ;

ಆ) ಇದರಲ್ಲಿ ಬೋಧಕ ಮತ್ತು ಬೋಧಕೇತರ ಕೊರತೆ ಇರುವುದು ನಿಜವೇ ; (ದರ್ಜೆವಾರು ವಿವರ ನೀಡುವುದು) ;

ಇ) ಸದರಿ ಕಾಲೇಜುಗಳಲ್ಲಿ ಶೌಚಾಲಯಗಳ ಕೊರತೆ ಇರುವುದು ನಿಜವೇ ;

ಈ) ಹಾಗಿದ್ದಲ್ಲಿ ಯಾವ ಕಾಲೇಜುಗಳಲ್ಲಿ ಶೌಚಾಲಯಗಳ ಕೊರತೆ ಇದೆ ;

ಉ) ಕೊರತೆಗಳನ್ನು ನೀಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು :

ಊ) ಹಾಗಿದ್ದಲ್ಲಿ ಯಾವಾಗ ಕೊರತೆಗಳನ್ನು ನೀಗಿಸಲಾಗುವುದು ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 4 ಸರ್ಕಾರಿ

1 ಖಾಸಗಿ

ಆ) ಹೌದು. ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕೊರತೆಯ ವಿವರ ಕೆಳಗಿಕಂಡತಿದೆ.

1.	ಪ್ರಾಚಾರ್ಯರು	2
2.	ಉಪನ್ಯಾಸಕರು	13
3.	ಪ್ರಥಮ ದರ್ಜೆ ಸಹಾಯಕರು	1
4.	ದ್ವಿದ. ಸಹಾಯಕರು	1

ಇ) ಹೌದು.

ಈ) ನಾಲ್ಕು ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ.

ಉ) ಶೌಚಾಲಯ ನಿರ್ಮಾಣಕ್ಕಾಗಿ ಪ್ರತ್ಯೇಕವಾದ ಆಯವ್ಯಯ ಒದಗಿಸಿಲ್ಲ. ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆಯಡಿ ಶೌಚಾಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಊ) ಹುದ್ದೆಗಳನ್ನು ತುಂಬುವ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳಲಾಗುವುದು. ಶೌಚಾಲಯಗಳ ನಿರ್ಮಾಣ ಕುರಿತಂತೆ ಆಯವ್ಯಯ ಲಭ್ಯತೆಯನ್ನು ಆಧರಿಸಿ ಸಾಧ್ಯವಾದಷ್ಟು ಬೇಗ ಕೊರತೆಯನ್ನು ನೀಗಿಸಲು ಪ್ರಯತ್ನಿಸಲಾಗುವುದು.

1107 (1647) ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನಬಾರ್ಡ್ ಆರ್.ಐ.ಡಿ.ಎಫ್–9 ಯೋಜನೆಯಡಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಕೆಲವು ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡದೆ ಕಡೆಗಣಿಸಿರುವುದು ನಿಜವೇ (ವಿವರ ನೀಡುವುದು) ;

ಆ) ಈ ರೀತಿ ಕಡೆಗಣಿಸಲು ಕಾರಣವೇನು ;

ಇ) ಕಡೆಗಣಿಸಲಾದ ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ನಬಾರ್ಡ್ ಆರ್.ಐ.ಡಿ.ಎಫ್–IX ಯೋಜನೆಯಡಿ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಕೆಲವು ಕ್ಷೇತ್ರಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ನಬಾರ್ಡ್‌ನ ಆರ್.ಐ.ಡಿ.ಎಫ್–IX ರಡಿಯಲ್ಲಿ 442 ಕಾಮಗಾರಿಗಳ ಪ್ರಸ್ತಾವನೆಯನ್ನು ನಬಾರ್ಡ್‌ನ ಸಚಿವ ಸಂಪುಟ ಉಪ ಸಮಿತಿಗೆ ಸಲ್ಲಿಸಲಾಗಿತ್ತು. ಆ ಪ್ರಸ್ತಾವನೆಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು. ಆದರೆ, ನಬಾರ್ಡ್ ಸಂಸ್ಥೆಯವರು 224 ಕಾಮಗಾರಿಗಳಿಗೆ ಮಾತ್ರ ಅನುಮೋದನೆಯನ್ನು ನೀಡಿರುತ್ತಾರೆ. ಇದರಿಂದ ಕೆಲವು ತಾಲ್ಲೂಕುಗಳು ಬಿಟ್ಟು ಹೋಗಿರುತ್ತದೆ.

ಇ) ಕಡೆಗಣಿಸಲಾದ ಕ್ಷೇತ್ರಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಚಿಂತನೆ ನಡೆಸಿದೆ.